# ಅಥಣಿ ಪ್ರದೇಶದ ಸ್ಮಾರಕಗಳು

**ವಿಲಾಸ ನಾಮದೇವ ಕಾಂಬಳೆ**

ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು
ಹಾಗೂ ಸ್ನಾತಕೋತ್ತರ ಅಧ್ಯಯನಕೇಂದ್ರ, ಅಥಣಿ, ಬೆಳಗಾವಿ.

DOI: https://doi.org/10.5281/zenodo.17297269

## ABSTRACT:

ಅಥಣಿ ಪ್ರದೇಶದಲ್ಲಿ ಸ್ಮಾರಕಗಳು ಹೆಚ್ಚಿನ ಸಂಖ್ಯೆಯಲ್ಲಿರುವುದನ್ನು ಕಾಣಬಹುದು. ಹೆಚ್ಚಾಗಿ ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸಂಬಂಧಿಸಿದ ದೇವಾಲಯಗಳನ್ನು ಕಾಣುತ್ತೇವೆ. ಈ ಪ್ರದೇಶವು ಕಲಚೂರಿಗಳು, ಯಾದವರು (ಸೇವುಣರು), ಶಿಲಹಾರ ಮನೆತನಗಳ ರಾಜರು ಆಳುವ ಮೂಲಕ ಸ್ಮಾರಕಗಳ ದೃಷ್ಟಿಯಿಂದ ಶ್ರೀಮಂತಗೊಳಿಸಿದ್ದಾರೆ. ದೇವಾಲಯಗಳು ಏಕಕೂಟ ಹಾಗೂ ತ್ರಿಕೂಟ ಮಾದರಿಯವು ಹೆಚ್ಚಾಗಿ ಕಾಣುತ್ತವೆ. ಸತ್ತಿಯ ಬದರಿನಾರಾಯಣ ದೇವಾಲಯ, ಸವದಿಯ ಗೋಪಾಲಕೃಷ್ಣ ದೇವಾಲಯ, ಕೊಕಟನೂರ ಕಲ್ಮೇಶ್ವರ ದೇವಾಲಯ, ತೇಲಸಂಗದ ಕಲ್ಮೇಶ್ವರ ದೇವಾಲಯ, ನಂದಗಾಂವ ಬಸವಣ್ಣ ದೇವಾಲಯ, ಅಥಣಿಯ ಅಮೃತ ಲಿಂಗೇಶ್ವರ ದೇವಾಲಯ, ಸಿದ್ದೇಶ್ವರ ದೇವಾಲಯ, ಬಳ್ಳಿಗೇರಿಯ ಬಸವಣ್ಣ ದೇವಾಲಯಗಳನ್ನು ಕಾಣುತ್ತೇವೆ.

## KEYWORDS:

ತ್ರಿಕೂಟ, ಉಬ್ಬು ಶಿಲ್ಪ, ಚಾವಣಿ, ಜಾಲಂದ್ರ, ಭುವನೇಶ್ವರಿ

**ಪೀಠಿಕೆ:**

ಅಥಣಿ ಪ್ರದೇಶವು ಸ್ಮಾರಕಗಳ ದೃಷ್ಟಿಯಿಂದ ಅತ್ಯಂತ ಮಹತ್ವವನ್ನು ಪಡೆದುಕೊಂಡ ಪ್ರದೇಶವಾಗಿದೆ. ಒಂದು ದೇಶದ ಸಂಸ್ಕೃತಿಯ ಪ್ರತೀಕಗಳೆಂದರೆ ಅಲ್ಲಿಯ ಸ್ಮಾರಕಗಳು. ಕೆಲವೊಮ್ಮೆ ಶಾಸನಗಳು ತಿಳಿಸಲಾರದೆ ಹೋದ ಅಂಶಗಳನ್ನು ಸ್ಮಾರಕಗಳ ಅಧ್ಯಯನದ ಮೂಲಕ ತಿಳಿಯಬಹುದು. ಪ್ರಾಚೀನ ಕಾಲದ ದೇವಾಲಯ, ವೀರಗಲ್ಲು ಹಾಗೂ ಇತರ ಸ್ಮಾರಕಗಳ ಅಧ್ಯಯನವು ಅಂದಿನ ಕಾಲದ ಕಲಾಭಿರುಚಿ, ಕಲಾಕುಶಲತೆ ಮೊದಲಾದ ವಿಷಯಗಳ ಚಿತ್ರಣವನ್ನು ಒದಗಿಸುತ್ತದೆ. ಪ್ರಸ್ತುತ ಪ್ರದೇಶವು ವೈವಿಧ್ಯಮಯವಾದ ಸ್ಮಾರಕಗಳನ್ನು ಹೊಂದಿದೆ. ಐತಿಹಾಸಿಕವಾಗಿ ಅಥಣಿ ಪ್ರದೇಶದ ಅನೇಕ ಸ್ಥಳಗಳು ಸಾಂಸ್ಕೃತಿಕವಾಗಿ ಮಹತ್ವವನ್ನು ಪಡೆದುಕೊಂಡಿವೆ. ಪ್ರಮುಖವಾಗಿ:

1. ಸತ್ತಿಯ ಬದರಿನಾರಾಯಣ (ಲಕ್ಷ್ಮೀ ನರಸಿಂಹ) ದೇವಾಲಯ: ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ನಿರ್ಮಾಣಗೊಂಡಿರುವ ಈ ದೇವಾಲಯವು ತ್ರಿಕೂಟಾಚಲವಾಗಿದೆ.
2. ಕೊಕಟನೂರ ಕಲ್ಮೇಶ್ವರ ದೇವಾಲಯ: ಇದು ಕಲ್ಯಾಣ ಚಾಲುಕ್ಯರ ಕಾಲದ ತ್ರಿಕೂಟ ಮಾದರಿಯ ದೇವಾಲಯವಾಗಿದೆ.
3. ನಂದಗಾಂವ ಬಸವಣ್ಣ ದೇವಾಲಯ: ಇದು ತ್ರಿಕೂಟ ಮಾದರಿಯ ದೇವಾಲಯವಾಗಿದೆ.
4. ಬಳ್ಳಿಗೇರಿ ಬಸವಣ್ಣ ದೇವಾಲಯ: ಇದು ಕಲ್ಯಾಣ ಚಾಲುಕ್ಯರ ಆರನೇ ವಿಕ್ರಮಾದಿತ್ಯನ ಕಾಲದ್ದಾಗಿದ್ದು, ತ್ರಿಕೂಟ ಮಾದರಿಯ ದೇವಾಲಯವಾಗಿದೆ.
5. ಅಥಣಿ ಅಮೃತಲಿಂಗೇಶ್ವರ ದೇವಾಲಯ: ಇದು ತ್ರಿಕೂಟ ಮಾದರಿಯ ದೇವಾಲಯವಾಗಿದ್ದು, ಕಲ್ಯಾಣ ಚಾಲುಕ್ಯರ ಕಾಲದ್ದಾಗಿದೆ.

**1. ಸತ್ತಿ: ಬದರಿನಾರಾಯಣ (ಲಕ್ಷ್ಮೀ ನರಸಿಂಹ) ದೇವಾಲಯ**

ಈ ಗ್ರಾಮವು ಅಥಣಿಯಿಂದ ದಕ್ಷಿಣಕ್ಕೆ 17 ಕಿ.ಮೀ. ಅಂತರದಲ್ಲಿದೆ ಹಾಗೂ ಕೃಷ್ಣಾ ನದಿಯ ಎಡದಂಡೆಯ ಮೇಲಿದೆ. ಇದು ಪುರಾತನ ಐತಿಹಾಸಿಕ ಸ್ಥಳವಾಗಿದೆ. ಇಲ್ಲಿ ಪುರಾತನ ಕಾಲದ 7 ದೇವಾಲಯಗಳಿದ್ದವು. ಈಗ ಕೇವಲ 5 ದೇವಾಲಯಗಳು ಸಿಗುತ್ತವೆ.

ಈ ದೇವಾಲಯವು ಗ್ರಾಮದ ಮಧ್ಯದಲ್ಲಿದ್ದು, ತ್ರಿಕೂಟಾಚಲವಾಗಿದೆ. ದಕ್ಷಿಣ ದಿಕ್ಕಿಗೆ ಪ್ರವೇಶದ್ವಾರವನ್ನು ಹೊಂದಿದೆ. ಈ ದೇವಾಲಯವು ಪ್ರಾಚೀನ ಕಾಲದಲ್ಲಿ ನಿರ್ಮಾಣಗೊಂಡಿದ್ದು, ಅಥಣಿ ತಾಲೂಕಿನ ಮುರಗುಂಡಿ ಗ್ರಾಮದ ತಾಮ್ರಪಟ ಶಾಸನದಲ್ಲಿ (ಕಾಮತ್ ಯು. ಸೂರ್ಯಕಾಂತ, 1987, ಬೆಳಗಾವಿ ಡಿಸ್ಟ್ರಿಕ್ಟ್ ಗ್ಯಾಜಿಟಿಯರ್, ಪು. 396, ಕ್ರಿ.ಶ. 1183) ಸತ್ತತ್ತಿ ಮಹಾ ಅಗ್ರಹಾರದ ನರಸಿಂಹ ದೇವಾಲಯಕ್ಕೆ ಕಲ್ಯಾಣ ಚಾಲುಕ್ಯ ದಂಡನಾಯಕನಾಗಿದ್ದ ಸೋಮರಾಚಾಮುಪತಿ ಎಂಬುವನು ಹಲವು ದಾನಗಳನ್ನು ನೀಡಿದ ಬಗ್ಗೆ ಉಲ್ಲೇಖವಿದೆ. ಇದರಿಂದಾಗಿ ಇಂದು ಸ್ಥಳೀಯವಾಗಿ ಕರೆಯುವ ಈ ಬದರಿನಾರಾಯಣ ದೇವಾಲಯವು ಕಲ್ಯಾಣ ಚಾಲುಕ್ಯರ ಅರಸರ ಕಾಲದಲ್ಲಿ ಲಕ್ಷ್ಮೀ ನರಸಿಂಹ ದೇವಾಲಯವೆಂದು ಕರೆಯುತ್ತಿದ್ದರು ಎಂದು ತಿಳಿದು ಬರುತ್ತದೆ.

ತ್ರಿಕೂಟ ಮಾದರಿಯ ತಲವಿನ್ಯಾಸ ಹೊಂದಿದ ಈ ಲಕ್ಷ್ಮೀ ನರಸಿಂಹ ದೇವಾಲಯದಲ್ಲಿ 3 ಗರ್ಭಗೃಹಗಳು ಗಾತ್ರದಲ್ಲಿ ಸಮನಾಗಿವೆ. ಹಾಗೆಯೇ ಇವುಗಳಿಗೆ ಹೊಂದಿಕೊಂಡಿರುವ 3 ಅರ್ಧಮಂಟಪಗಳಿದ್ದು, ಇವು ಕೂಡ ಒಂದಕ್ಕೊಂದು ಸಮನಾಗಿವೆ ಹಾಗೂ ಗರ್ಭಗೃಹಗಳಷ್ಟು ವಿಸ್ತೀರ್ಣವನ್ನು ಹೊಂದಿವೆ. ಇವುಗಳಿಗೆ ಹೊಂದಿಕೊಂಡಿರುವ ಚತುಸ್ರಾಕಾರದ ವಿಶಾಲವಾದ ನವರಂಗವಿದೆ. ನವರಂಗದ ಪ್ರವೇಶದ್ವಾರದ ಎರಡು ಬಾಜುವಿಗೆ ಜಾಲಂದ್ರಗಳನ್ನು ಅಳವಡಿಸಲಾಗಿದೆ ಮತ್ತು ನವರಂಗದ ಪ್ರವೇಶದ್ವಾರದ ಲಲಾಟ ಬಿಂಬದಲ್ಲಿ ಲಕ್ಷ್ಮೀ ನರಸಿಂಹನ ಉಬ್ಬು ಶಿಲ್ಪವಿದೆ. 3 ಗರ್ಭಗೃಹಗಳಲ್ಲಿ ಕಿಟಕಿ ಜಾಲಂದ್ರಗಳಿರದೆ ಕತ್ತಲೆಯಿಂದ ಕೂಡಿದೆ. ಇವು ಒಂದಕ್ಕೊಂದು ಸಮಾನವಾಗಿವೆ, 2.08 ಮೀ. ಉದ್ದಗಲ ಹೊಂದಿದ್ದು, ಹಾಗೆಯೇ ಒಂದಕ್ಕೊಂದು ಎದುರು ಮುಖವಾಗಿ ದಕ್ಷಿಣ ಹಾಗೂ ಪೂರ್ವ–ಪಶ್ಚಿಮ ದಿಕ್ಕುಗಳಿವೆ. ಎರಡೆರಡೂ ಮೂಲೆ ಕಂಬಗಳಿವೆ. ಇವುಗಳ ಛಾವಣಿಗಳಲ್ಲಿ ಅಲಂಕೃತವಾದ ಭುವನೇಶ್ವರಿಗಳನ್ನು ಕಂಡರಿಸಿದ್ದಾರೆ. ಪ್ರತಿ ಗರ್ಭಗೃಹಗಳಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ ಲಿಂಗ ಶಿಲ್ಪಗಳನ್ನು ಕಾಣಬಹುದು.

ಈ ದೇವಾಲಯವು ಅತಿ ಸುಂದರವಾಗಿ ಕೆತ್ತಲ್ಪಟ್ಟ 16 ಕಂಬಗಳಿಂದ ನಿರ್ಮಾಣಗೊಂಡಿದ್ದು, ನಾಲ್ಕು ಕಂಬಗಳು ನವರಂಗದ ಮಧ್ಯದಲ್ಲಿ ಪೂರ್ಣಕಂಬಗಳಾಗಿದ್ದು, 12 ಗೋಡೆಕಂಬಗಳಾಗಿರುತ್ತವೆ. ಚೌಕಾಕಾರದ ನವರಂಗವು ಆರು ದೇವಕೋಷ್ಟಕಗಳನ್ನು ಹೊಂದಿದ್ದು, ಅದರಲ್ಲಿ ಶಿವಪಾರ್ವತಿಯ ಉಬ್ಬು ಶಿಲ್ಪ ಮೂರ್ತಿಯಿದೆ. ಈ ದೇವಾಲಯವು 3 ಗರ್ಭಗೃಹ, 3 ಅಂತರಾಳಗಳನ್ನು ಹೊಂದಿದ್ದು, ಸಮಾನ ಗಾತ್ರವನ್ನು ಹೊಂದಿದೆ. ಈ ಎಲ್ಲ ಪ್ರವೇಶದ್ವಾರಗಳು 2.15 ಮೀ. ಎತ್ತರ ಹಾಗೂ 0.33 ಮೀ. ಅಗಲವಾಗಿದೆ. ಮೇಲ್ಭಾಗದಲ್ಲಿ ದ್ರಾವಿಡ ಮಾದರಿಯ ಶಿಖರಗಳ ಕೆತ್ತನೆಗಳಿವೆ. ಪ್ರತಿಯೊಂದು ಕಂಬವು ಚೌಕಾಕಾರದಿದ್ದು, ಮಧ್ಯದಲ್ಲಿರುವ ನಾಲ್ಕು ಕಂಬಗಳು ಛಾವಣಿಯ ಭಾರವನ್ನು ಹೊತ್ತುಕೊಂಡು ನಿಂತಿವೆ. ಎಲ್ಲ ಕಂಬಗಳು ಸುಂದರವಾಗಿ ಚಾಲುಕ್ಯ ಶೈಲಿಯಲ್ಲಿ ಅಲಂಕೃತವಾಗಿವೆ.

**2. ಕೊಕಟನೂರ ಕಲ್ಮೇಶ್ವರ ದೇವಾಲಯ:**

ಕೊಕಟನೂರು ಅಥಣಿಯಿಂದ ಪೂರ್ವಕ್ಕೆ 18 ಕಿಲೋಮೀಟರ್ ಅಂತರದಲ್ಲಿದೆ. ಈ ಗ್ರಾಮವು ಐತಿಹಾಸಿಕ ಪವಿತ್ರ ಸ್ಥಳವಾಗಿದ್ದು, ಪ್ರಾಚೀನ ವಾಸ್ತು ಶಿಲ್ಪ ಕಲೆಯ ನೆಲೆಯೂ ಆಗಿದೆ. ಇಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ಕಲ್ಮೇಶ್ವರ ದೇವಾಲಯವಿದೆ. ಈ ದೇವಾಲಯವು ತ್ರಿಕೂಟಾಚಲವಾಗಿದೆ. ಈ ದೇವಾಲಯಕ್ಕೆ ಇರುವ ಇನ್ನಿತರ ಹೆಸರುಗಳೆಂದರೆ ತ್ರಿಂಬಕೇಶ್ವರ, ಚಂದ್ರೇಶ್ವರ ಮತ್ತು ತ್ರಿಕೂಟೇಶ್ವರ. ಈ ಕಲ್ಮೇಶ್ವರ ದೇವಾಲಯವು ಅಪೂರ್ವ ಕೆತ್ತನೆಯಿಂದ ಕೂಡಿದೆ. ವಾಸ್ತುಶಿಲ್ಪ ಮತ್ತು ಶಿಲಾ ಶಾಸನಗಳ ಆಗರವಾಗಿದ್ದು, ಕಲ್ಯಾಣ ಚಾಲುಕ್ಯರ, ಕಲಚೂರ್ಯರ ಹಾಗೂ ಯಾದವರ ಆಳ್ವಿಕೆಗೆ ಸಂಬಂಧಪಟ್ಟ ಶಿಲಾ ಶಾಸನಗಳು ಈ ದೇವಾಲಯದಲ್ಲಿವೆ. ಆದ್ದರಿಂದ ಕಲ್ಮೇಶ್ವರ ದೇವಾಲಯದ ನಿರ್ಮಾಣದ ಹಾಗೂ ನಿರ್ಮಾತೃರ ಬಗ್ಗೆ ನಿರ್ದಿಷ್ಟವಾಗಿ ತಿಳಿಯದಿದ್ದರೂ ಕೂಡ, ಇಲ್ಲಿರುವ ಶಾಸನಾಧಾರದಿಂದ ಈ ದೇವಾಲಯವು ಕಲ್ಯಾಣ ಚಾಲುಕ್ಯರ ಆಳ್ವಿಕೆಯಲ್ಲಿ ನಿರ್ಮಾಣವಾಗಿದೆ ಎಂದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಕ್ರಿ.ಶ. 1050 ರ ಶಾಸನಾಧಾರಗಳಿಂದ ತಿಳಿದುಬರುವ ಕಲ್ಮೇಶ್ವರ ದೇವಾಲಯವೇ ಪ್ರಾಚೀನವಾಗಿದೆ. ಈ ದೇವಾಲಯವು ತ್ರಿಕೂಟ ಮಾದರಿಯಲ್ಲಿದ್ದು, 3 ಗರ್ಭಗೃಹ, 3 ಮುಖಮಂಟಪವನ್ನು ಮತ್ತು ಇದಕ್ಕೆ ಹೊಂದಿಕೊಂಡು ಒಂದು ನವರಂಗವನ್ನು ಹೊಂದಿದೆ. ಹೊರಗಡೆ ಮುರಿದು ಬಿದ್ದಿರುವ ಮುಖಮಂಟಪವಿದೆ.

ಗರ್ಭಗೃಹ: ಈ ದೇವಾಲಯವು 3 ಗರ್ಭಗೃಹಗಳನ್ನು ಹೊಂದಿದೆ. ಎಲ್ಲ ಗರ್ಭಗೃಹಗಳಲ್ಲಿ ಶಿವಲಿಂಗಗಳಿವೆ. ಮುಖ್ಯ ಗರ್ಭಗೃಹವು ಪೂರ್ವಾಭಿಮುಖವಾಗಿದ್ದು, ದಕ್ಷಿಣ ಮತ್ತು ಉತ್ತರಕ್ಕಿರುವ ಗರ್ಭಗೃಹಗಳು ಒಂದಕ್ಕೊಂದು ಎದುರು ಮುಖವಾಗಿವೆ. ಎರಡು ಗರ್ಭಗೃಹಗಳು ಪ್ರವೇಶ ದ್ವಾರವನ್ನು ಹೊಂದಿವೆ. ಮೂಲೆ ಕಂಬಗಳನ್ನು ಹೊಂದಿದ್ದು, ಒಂದಕ್ಕೊಂದು ಸಮಾನವಾಗಿದೆ. ಇವುಗಳ ಮೇಲ್ಛಾವಣಿಯ ಮಧ್ಯದಲ್ಲಿ ಸುಂದರವಾಗಿ ಕಡೆದ ಭುವನೇಶ್ವರಿಗಳಿವೆ. ಈ 3 ಗರ್ಭಗೃಹಗಳಲ್ಲಿ ಯಾವುದೇ ಜಾಲಂದ್ರಗಳಿಲ್ಲ. ಈ ದೇವಾಲಯವು 3 ಗರ್ಭಗೃಹಗಳಿಗೆ ಹೊಂದಿಕೊಂಡು ತೆರೆದ ಅಂತರಾಳವನ್ನು ಹೊಂದಿದೆ. ಇವು ಎರಡೆರಡೂ ಮೂಲೆ ಕಂಬಗಳನ್ನು ಹಾಗೂ ಮುಂಭಾಗದಲ್ಲಿ ಅರ್ಧ ಕಂಬಗಳನ್ನು ಹೊಂದಿವೆ. ಇವುಗಳ ಛಾವಣಿ ಭಾಗದಲ್ಲಿಯೂ ಅಲಂಕೃತಗೊಂಡ ಭುವನೇಶ್ವರಿಗಳಿವೆ. ಗರ್ಭಗೃಹದ ಅಂತರಾಳದಲ್ಲಿ ಯಾದವ ಅರಸ ರಾಮಚಂದ್ರದೇವನ ಕಾಲದ ಕ್ರಿಸ್ತಶಕ 1306 ರ ಶಾಸನಗಳನ್ನು ನಿಲ್ಲಿಸಲಾಗಿದೆ. ಈ ದೇವಾಲಯದ ಅರ್ಧ ಮಂಟಪಗಳಿಗೆ ಹೊಂದಿಕೊಂಡು ಒಂದು ನವರಂಗವಿದೆ. ಇದರ ಮಧ್ಯದಲ್ಲಿ 4 ಪೂರ್ಣ ಕಂಬಗಳಿವೆ. ನಂದಿ ಮಂಟಪದಲ್ಲಿ ನಂದಿ ಮೂರ್ತಿಯು ಬೆನಚು ಶಿಲೆಗಳಿಂದ ನಿರ್ಮಿತಗೊಂಡಿದೆ.

1) ಈ ದೇವಾಲಯದ ಪ್ರತಿಯೊಂದು ಗರ್ಭಗೃಹಗಳು ಪ್ರವೇಶ ದ್ವಾರವನ್ನು ಹೊಂದಿವೆ. ಈ ಮೂರು ದ್ವಾರಗಳು 1.70 ಮೀಟರ್ ಉದ್ದ ಹಾಗೂ 0.84 ಮೀಟರ್ ಅಗಲವನ್ನು ಹೊಂದಿವೆ. ಕಲ್ಯಾಣ ಚಾಲುಕ್ಯರ ಶೈಲಿಯ ವಿಶಿಷ್ಟ ಮಾದರಿಯ ಕಂಬಗಳು ದೇವಾಲಯದಲ್ಲಿವೆ. ಇವು ಅಲಂಕೃತವಾಗಿವೆ, ಪೀಠಾಧಾರಿಗಳಾಗಿವೆ. ಕಂಬಗಳ ಮೇಲೆ ಬ್ರಹ್ಮ ಮತ್ತು ಮಹಿಷಾಸುರಮರ್ದಿನಿಯ ಉಬ್ಬು ಶಿಲ್ಪಗಳಿವೆ. ಈ ದೇವಾಲಯದಲ್ಲಿ 8 ಪೂರ್ಣ ಕಂಬಗಳಿವೆ, 36 ಗೋಡೆ ಕಂಬಗಳಿವೆ. ಸುಂದರವಾದ ಅಲಂಕಾರಣೆಯನ್ನು ಹೊಂದಿವೆ. ಈ ದೇವಾಲಯಕ್ಕೆ ಕಪ್ಪು ಶಿಲಾದಮ್ಮಿಗಳನ್ನು ಉಪಯೋಗಿಸಿದ್ದಾರೆ. ಅಗಲವಾದ ದಮ್ಮಿಗಳನ್ನು ಉಪಯೋಗಿಸಿದ್ದಾರೆ. ಹಾಗೆಯೇ ದೇವಾಲಯದ ಅಧಿಷ್ಠಾನವು ಎರಡು ರೀತಿಯ ಅಲಂಕಾರಣೆಯಿಂದ ಕೂಡಿದೆ. ಗರ್ಭಗೃಹದಿಂದ ನವರಂಗದವರೆಗಿನ ಅಧಿಷ್ಠಾನದ ಮೇಲಿನ ಅಲಂಕರಣೆ ಒಂದು ವಿಧದಲ್ಲಿದ್ದರೆ, ಮುಖಮಂಟಪದ ಅಧಿಷ್ಠಾನ ಮತ್ತೊಂದು ವಿಧವಾಗಿದೆ.

ಅಲಂಕೃತವಾದ ಕಂಬಗಳು ಒಂದರ ಪಕ್ಕದಲ್ಲಿ ಒಂದು ಇರುವಂತೆ ಅಳವಡಿಸಿದ್ದಾರೆ. ದೇವಾಲಯದ ಮೇಲ್ಛಾವಣಿಯು ಸಮತಟ್ಟವಾಗಿದ್ದು, ಶಿಖರವಿರುವುದಿಲ್ಲ.

**3. ನಂದಗಾಂವ ಬಸವಣ್ಣ ದೇವಾಲಯ**

**4. ಬಳ್ಳಿಗೇರಿ ಬಸವಣ್ಣ ದೇವಾಲಯ**

ಬಳ್ಳಿಗೇರಿಯು ಅಥಣಿಯಿಂದ ಉತ್ತರಕ್ಕೆ 18 ಕಿಲೋಮೀಟರ್ ಅಂತರದಲ್ಲಿದೆ. ಪ್ರಾಚೀನ ಶಾಸನಗಳಲ್ಲಿ ಈ ಗ್ರಾಮವನ್ನು ಬಾಳಿಂಗೇರಿ ಎಂಬ ಉಲ್ಲೇಖವಿದೆ. ಇಲ್ಲಿರುವ ಬಸವಣ್ಣ ದೇವಾಲಯವು ಬಳ್ಳಿಗೇರಿಯಿಂದ ಪೂರ್ವಕ್ಕೆ ಎತ್ತರವಾದ ದಿಬ್ಬದ ಮೇಲಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಮುಖ್ಯ ಗರ್ಭಗೃಹದ ಲಲಾಟದಲ್ಲಿ ಲಕ್ಷ್ಮೀ ನರಸಿಂಹರ ಉಬ್ಬು ಶಿಲ್ಪವಿದೆ. ದ್ವಾರದ ಬಲ ಗೋಡೆಯ ಒಳಭಾಗದಲ್ಲಿ ಹಾಗೂ ಹೊರಭಾಗದಲ್ಲಿ ಕಲ್ಯಾಣ ಚಾಲುಕ್ಯರ ಎರಡು ಶಾಸನಗಳಿವೆ. ಮೂರನೆಯ ಒಂದು ಶಾಸನವು ಕಲ್ಯಾಣ ಚಾಲುಕ್ಯರ ಆರನೇ ವಿಕ್ರಮಾದಿತ್ಯನ ಕಾಲದ ಎರಡು ಶಾಸನಗಳೆಂದು ದೊರೆತಿವೆ. ಚಾಲುಕ್ಯ ವಂಶದ ಕೆಲವು ಹೆಸರುಗಳಿವೆ. ಈ ದೇವಾಲಯವನ್ನು ಉಬದಾನಿಯ ನರಸಿಂಹ ದೇವಾಲಯವೆಂದು ಉಲ್ಲೇಖಿಸಿದೆ.

ವೀರಭದ್ರೇಶ್ವರ ದೇವಾಲಯ: ಈ ದೇವಾಲಯವು ಬಸವಣ್ಣ ದೇವಾಲಯದ ಮುಂದುಗಡೆ ಇರುವ ಪ್ರದೇಶದಲ್ಲಿ ನಿರ್ಮಿತವಾಗಿದೆ. ಈ ದೇವಾಲಯವು ತ್ರಿಕೂಟಾಚಲವಾಗಿದೆ. ಇದು ಗರ್ಭಗೃಹ, ನವರಂಗ, ಅರ್ಧ ಮಂಟಪ ಹಾಗೂ ಮುಖ ಮಂಟಪವನ್ನು ಹೊಂದಿದೆ. ಇದು ಕಲ್ಯಾಣ ಚಾಲುಕ್ಯ ಶೈಲಿಯನ್ನು ಹೊಂದಿದೆ. ಇದು ಸಂಪೂರ್ಣವಾಗಿ ನಾಶವಾಗುವ ಹಂತದಲ್ಲಿದೆ. ಈ ದೇವಾಲಯವು ತ್ರಿಕೂಟಾಚಲವಾಗಿದೆ. ಗರ್ಭಗೃಹದಲ್ಲಿ ಮುರಿದು ಬಿದ್ದಿರುವ ವೀರಭದ್ರನ ವಿಗ್ರಹವಿದ್ದು, ಮರಳು ಮಿಶ್ರಿತ ಕಲ್ಲಿನಲ್ಲಿ ಕೆತ್ತಲ್ಪಟ್ಟಿದೆ. ಗರ್ಭಗೃಹದ ನಾಲ್ಕು ಮೂಲೆಗಳಲ್ಲಿ ಚಾಲುಕ್ಯ ಶೈಲಿಯ ಕೆತ್ತನೆಯಿಂದ ಕೂಡಿದ ಕಂಬಗಳನ್ನು ಕಾಣಬಹುದು. ಪಾರ್ಶ್ವದ ಗರ್ಭಗೃಹಗಳೆರಡರಲ್ಲಿ ಯಾವುದೇ ವಿಗ್ರಹಗಳು ಕಂಡುಬರುವುದಿಲ್ಲ. ಈ ದೇವಾಲಯದ ಮೂರು ಗರ್ಭಗೃಹಗಳಿಗೆ ಹೊಂದಿಕೊಂಡಂತೆ ಒಂದು ವಿಶಾಲವಾದ ನವರಂಗವಿದೆ. ಈ ನವರಂಗದಲ್ಲಿ ಸುಂದರವಾಗಿ ಕೆತ್ತಲ್ಪಟ್ಟ 30 ಕಂಬಗಳಿವೆ. ಒಂದು ವಿಶಾಲವಾದ ನವರಂಗವಿದೆ. ನಾಲ್ಕು ಕಂಬಗಳು ಮಧ್ಯದಲ್ಲಿದ್ದು, ಪೂರ್ಣ ಕಂಬಗಳಿಗೆ ಮೇಲ್ಛಾವಣಿಯನ್ನು ಹೊತ್ತುಕೊಂಡು ನಿಂತಿವೆ. ಇನ್ನುಳಿದ 16 ಕಂಬಗಳು ಗೋಡೆಯಲ್ಲಿದ್ದು, ಅರ್ಧ ಕಂಬಗಳಿವೆ. ನವರಂಗವು ವಿಶಾಲವಾಗಿದ್ದು, ಪ್ರವೇಶ ದ್ವಾರವನ್ನು ಹೊಂದಿದೆ. ಮುಖ ಮಂಟಪವು ನವರಂಗಕ್ಕೆ ಹೊಂದಿಕೊಂಡು ನಿರ್ಮಿತವಾಗಿರುತ್ತದೆ. ನವರಂಗಕ್ಕಿಂತ ಕಡಿಮೆ ಸ್ಥಳಾವಕಾಶವನ್ನು ಹೊಂದಿರುತ್ತದೆ. ಮುಖ ಮಂಟಪವು ತಗ್ಗಿನಲ್ಲಿದ್ದು, ಕೆತ್ತನೆಯಿಂದ ಕೂಡಿರುತ್ತದೆ. ಮುಖ ಮಂಟಪದ ಒಳಗೆ ನವರಂಗದ ಗೋಡೆಯ ಕಲ್ಲಿನಲ್ಲಿ ಸಪ್ತ ಮಾತೃಕೆಯರ ಶಿಲ್ಪವಿದೆ. ಅವರ ವಾಹನಗಳನ್ನು ಚಿತ್ರಿಸಿದೆ.

**5. ಅಥಣಿ ಅಮೃತಲಿಂಗೇಶ್ವರ ದೇವಾಲಯ**

ನಗರದ ಮಧ್ಯದಲ್ಲಿರುವ ಕಲ್ಯಾಣ ಚಾಲುಕ್ಯರ ಕಾಲದ ವಾಸ್ತು ಲಕ್ಷಣಗಳನ್ನು ಮೈಗೂಡಿಸಿಕೊಂಡು ನಿರ್ಮಿತವಾದ ಅಮೃತಲಿಂಗೇಶ್ವರ ದೇವಾಲಯವಿದೆ. ಇದು ಜೈನ ಧರ್ಮಕ್ಕೆ ಸೇರಿದಾಗಿದೆ. ಈ ದೇವಾಲಯವನ್ನು ಶಿಷ್ಟ ಶಿಲೆಯಿಂದ ನಿರ್ಮಿಸಿರುವುದು ಕಂಡುಬರುತ್ತದೆ. ಈ ದೇವಾಲಯವು ಗರ್ಭಗೃಹ, ನವರಂಗ ಹಾಗೂ ಮುಖ ಮಂಟಪಗಳನ್ನು

ಹೊಂದಿದೆ. ಕೆಲವು ಭಾಗಗಳು ಇತ್ತೀಚೆಗೆ ಜೀರ್ಣೋದ್ಧಾರಗೊಂಡಿದೆ. ಆದರೂ ಸಹಿತ ಸದ್ಯ ಉಳಿದಿರುವ ಕುರುಹುಗಳಿಂದ ಇದರ ವಾಸ್ತು ಲಕ್ಷಣದ ವಿವರವನ್ನು ಅರಿಯಬಹುದು. ಈ ದೇವಾಲಯವು ಏಕಕೂಟ ಮಾದರಿಯ ತಲವಿನ್ಯಾಸವನ್ನು ಹೊಂದಿದ್ದು, ಗರ್ಭಗೃಹ, ಅಂತರಾಳ ಹಾಗೂ ನವರಂಗಕ್ಕೆ ಹೊಂದಿಕೊಂಡು ಜೀರ್ಣೋದ್ಧಾರಗೊಂಡ ಮುಖ ಮಂಟಪವಿದೆ. ಮುಖ ಮಂಟಪದ ಉತ್ತರ ದಿಕ್ಕಿನ ಗೋಡೆಗೆ ಹೊಂದಿಕೊಂಡು ಇತ್ತೀಚೆಗೆ ನಿರ್ಮಿಸಿದ ಆಧುನಿಕ ಶೈಲಿಯ ವೀರಭದ್ರ ದೇವಾಲಯವಿದೆ. ಅಮೃತ ಲಿಂಗೇಶ್ವರ ದೇವಾಲಯದ ಇನ್ನುಳಿದ ಎರಡು ದಿಕ್ಕುಗಳಲ್ಲಿ ಮನೆಗಳು ಇರುವುದರಿಂದ, ದೇವಾಲಯದ ಎದುರಿಗೆ ಸ್ಥಳಾವಕಾಶವಿರದೆ ಇಕ್ಕಟ್ಟಿನಲ್ಲಿದ್ದು, ಅದರ ಸೌಂದರ್ಯವು ಅಡಗಿ ಹೋಗಿದೆ. ಈ ದೇವಾಲಯದ ಅಧಿಷ್ಠಾನ ಭಾಗದಿಂದ ಮೇಲೆ ಮಾತ್ರ ಪ್ರಾಚೀನ ಶೈಲಿಯ ಕಟ್ಟಡವಿದ್ದು, ಶಿಖರದ ಭಾಗಗಳು ಇತ್ತೀಚೆಗೆ ಜೀರ್ಣೋದ್ಧಾರಗೊಂಡಿರುತ್ತದೆ. ಗರ್ಭಗೃಹವು ಚಿಕ್ಕದಾಗಿದ್ದು, ಕತ್ತಲೆಯಿಂದ ಕೂಡಿದಾಗಿದೆ. ಗೋಡೆಗಳ ಮಧ್ಯದಲ್ಲಿ ಮುಂದೆ ಚಾಚಿ ಹೋದ ಎರಡು ನಾಗಮಂದಿರಗಳನ್ನು ಅಳವಡಿಸಿದ್ದಾರೆ. ಗರ್ಭಗೃಹದ ಒಳಭಾಗದಲ್ಲಿ ಗೋಡೆಗಳನ್ನೆಲ್ಲ ಬಿಳಿ ಶಾಬಾದಿ ಫರಶಿ ಕಲ್ಲಿನಿಂದ ಮುಚ್ಚಿದ್ದಾರೆ. ಗರ್ಭಗೃಹದ ಮಧ್ಯದಲ್ಲಿ ಶಿವಲಿಂಗವಿದೆ. ಲಿಂಗದ ಅಧಿಷ್ಠಾನವು ವೃತ್ತಾಕಾರವಾಗಿದೆ. ಗರ್ಭಗೃಹವು ಚತುಸ್ರಾಕಾರವಾಗಿದ್ದು, 2.54 ಮೀಟರ್ ಉದ್ದದ ಅಗಲದ ಒಳ ವಿಸ್ತೀರ್ಣ ಹೊಂದಿದೆ. ದೇವಾಲಯದ ಗರ್ಭಗೃಹಕ್ಕೆ ಹೊಂದಿಕೊಂಡು ತೆರೆದ ಅಂತರಾಳವಿದೆ. ಈ ಅಂತರಾಳವು ಸಹ ನಾಲ್ಕು ಮೂಲೆಗಳಲ್ಲಿ ಅರ್ಧ ಕಂಬಗಳನ್ನು ಹೊಂದಿದೆ. ಮೂಲೆಯಲ್ಲಿ ಭುವನೇಶ್ವರಿ ಇದೆ. ಅಂತರಾಳಕ್ಕೆ ಹೊಂದಿಕೊಂಡು ವಿಶಾಲವಾದ ನವರಂಗವಿದೆ. ನವರಂಗವು ಪ್ರವೇಶ ದ್ವಾರದಿಂದ ಕೂಡಿದ್ದು, ನವರಂಗ ದ್ವಾರದ ಎರಡು ಕಡೆಗಳಲ್ಲಿ ಜಾಲಂದ್ರಗಳನ್ನು ಅಳವಡಿಸಿದ್ದಾರೆ. ನವರಂಗದ ಮಧ್ಯದಲ್ಲಿ ನಂದಿಮಂಟಪವಿದೆ. ಈ ನಂದಿಯು ಗರ್ಭಗೃಹದಲ್ಲಿರುವ ಲಿಂಗಕ್ಕೆ ಎದುರು ಮುಖ ಮಾಡಿ ಕುಳಿತಿದೆ. ನವರಂಗದಲ್ಲಿ 16 ಕಂಬಗಳಿವೆ. 4 ಪೂರ್ಣ ಕಂಬಗಳು ಮೇಲ್ಛಾವಣಿ ಭಾರವನ್ನು ಹೊತ್ತಿವೆ. ಉಳಿದವು ಗೋಡೆಯ ಅರ್ಧ ಕಂಬಗಳಾಗಿವೆ. ನವರಂಗದಲ್ಲಿ ಬರಿದಾದ ದೇವಕೋಷ್ಟಕಗಳಿವೆ. ನವರಂಗವು ಚತುಸ್ರಾಕಾರವಾಗಿದೆ. ಈ ದೇವಾಲಯದ ಗರ್ಭಗೃಹದ ದ್ವಾರಶಾಖೆಗಳು ಅಲಂಕೃತವಾಗಿದ್ದು, ದ್ವಾರ ಶಾಖೆಗಳ ಎರಡು ಬಾಜುವಿಗೆ ಚಿಕ್ಕಗಾತ್ರದ ಅರ್ಧ ಕಂಬಗಳ ಕೆತ್ತನೆ, ಪಟ್ಟಿಕೆಗಳು, ಹೂಬಳ್ಳಿ ಕೆತ್ತನೆಯ ಪಟ್ಟಿ, ಲತಾಸುರೂಳಿ ಹಾಗೂ ಗಣಗಳ ಅಲಂಕಾರಗಳನ್ನು ಕೊರೆಯಲಾಗಿದೆ. ಚಾಲುಕ್ಯ ಶೈಲಿಯನ್ನು ಹೋಲುವ ವಿಶಿಷ್ಟ ಕೆತ್ತನೆಯಿಂದ ಕೂಡಿರುವ ಕಂಬಗಳು ಈ ದೇವಾಲಯದಲ್ಲಿದೆ.

**ಸಮಾರೋಪ:**

ಪ್ರಸ್ತುತ ಅಥಣಿ ಪ್ರದೇಶದ ಸ್ಮಾರಕಗಳು ಬೆಳಗಾವಿ ಜಿಲ್ಲೆಯಲ್ಲಿ ಅಗ್ರಸ್ಥಾನವನ್ನು ಪಡೆದುಕೊಂಡಿವೆ. ಇಲ್ಲಿ ಹೆಚ್ಚಾಗಿ ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯಗಳನ್ನು ಕಾಣುತ್ತೇವೆ. ಅವು ವಿಶಿಷ್ಟ ಮತ್ತು ಅಲಂಕೃತ ಕಟ್ಟಡಕ್ಕೆ ಹೆಸರುವಾಸಿಯಾಗಿವೆ. ಇಲ್ಲಿ ಹೆಚ್ಚಾಗಿ ತ್ರಿಕೂಟ ಮಾದರಿಯ ದೇವಾಲಯಗಳನ್ನು ಕಾಣುತ್ತೇವೆ. ಪ್ರತಿಯೊಂದು ಗರ್ಭಗೃಹವು ಸಮಾನವಾದ ಗರ್ಭಗೃಹ, ನವರಂಗವನ್ನು ಕಾಣುತ್ತೇವೆ. ಚಾಲುಕ್ಯ ಕಟ್ಟಡ ಶೈಲಿಯನ್ನು ವಿಶಿಷ್ಟವಾಗಿ ಕಾಣುತ್ತೇವೆ. ಒಟ್ಟಿನ ಮೇಲೆ ಪ್ರಸ್ತುತ ಪ್ರದೇಶವು ಸ್ಮಾರಕಗಳ ದೃಷ್ಟಿಯಿಂದ ಶ್ರೀಮಂತವಾಗಿದೆ.

## ಪರಾಮರ್ಶನ ಗ್ರಂಥಗಳು:


1. ಸೂರ್ಯನಾಥ ಯು. ಕಾಮತ್., (1987), ಬೆಳಗಾವಿ ಜಿಲ್ಲೆಯ ಗೆಜೆಟಿಯರ್, ಪರಶ್ರೀ ಪ್ರಿಂಟರ್ಸ್, ಬೆಂಗಳೂರು.
2. ನಂಜುಂಡಸ್ವಾಮಿ. ಎ.ಎನ್., (1971), ಚಾಲುಕ್ಯರ ಇತಿಹಾಸ (ಕರ್ನಾಟಕ ಇತಿಹಾಸ ಮಾಲಿಕೆ 4), ಸಮಾಜ ಪುಸ್ತಕಾಲಯ ಧಾರವಾಡ.
3. ಗೋಪಾಲ್ ರಾವ್ ಎಚ್.ಎಸ್.: ಕಲ್ಯಾಣ ಚಾಲುಕ್ಯರ ದೇವಾಲಯಗಳು.
4. ರಾಜಶೇಖರ್ ಎಸ್., (1988) ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ: ಸುಜಾತಾ ಪಬ್ಲಿಕೇಶನ್, ಧಾರವಾಡ.
5. ನಾಗರಾಜ್ ಕೆ.ಜಿ., (1994) ಕಲ್ಯಾಣಿ ಚಾಲುಕ್ಯರ ವಾಸ್ತುಶಿಲ್ಪ ಕಲಾ ಪ್ರಪಂಚ – ಕರ್ನಾಟಕ ಲಲಿತ ಕಲಾ ಅಕಾಡೆಮಿ ಬೆಂಗಳೂರು.
6. ವಾಲಿ ಎಂ.ಎನ್., (1978) ಅಥಣಿ ತಾಲೂಕು ದರ್ಶನ. ಐ.ಬಿ.ಎಚ್ ಪ್ರಕಾಶನ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.